ಶಾಸಕರಾದವರು ಏನು ಮಾಡಬೇಕೆಂಬುದನ್ನು ತಾವು ಅರ್ಥಮಾಡಿಕೊಳ್ಳಬೇಕು. ತಾಂತ್ರಿಕವಾಗಿ ಕೆರೆ 500 ಎಕರೆಯಿಂದ ಮೇಲಿರುವುದು, 31 ಕೆರೆ 100 ಎಕರೆಯಿಂದ ಮೇಲಿರುವುದು, 150 ಎಕರೆಯಿಂದ ಮೇಲಿರುವುದು ಇದೆ. ಅದನ್ನು ನೋಡುವುದಕ್ಕೆ ಒಂದು ಡಿಪಾರ್ಟ್‌ಮೆಂಟ್ ಬೇಡ ಎಂದರೆ ಸಮಂಜಸ ಅಲ್ಲ ಎಂದು ನಾನು ಭಾವಿಸುತ್ತೇನೆ. ಕೃಪೆ ಮಾಡಿ ಅಲ್ಲಿಗೆ ಒಂದು ಕಚೇರಿ ಕೊಡಬೇಕು. ಸಬ್ -ಡಿವಿಷನ್‌ಗಾದರೂ ಒಂದು ಕಚೇರಿ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಕೆ.ಎಸ್. ಮಲ್ಲಿಕಾರ್ಜುನ ಪ್ರಸನ್ನ : ಮಾನ್ಯ ಸಭಾಧ್ಯಕ್ಷರೆ 148 ಕೆರೆಗಳೂ ನಮಗೆ ಬರುವುದಿಲ್ಲ. ಜಿಲ್ಲಾ ಪರಿಷತ್ತಿಗೆ 143 ಕೆರೆಗಳೂ ನಮಗೆ ಬರುವುದಿಲ್ಲ. ಜಿಲ್ಲಾ ಪರಿಷತ್ತಿಗೆ 143 ಕೆರೆಗಳು ಬರುತ್ತವೆ. ವರ್ಕಲೋಡ್ ಜಾಸ್ತಿಯಾದರೆ ತಾವು ಹೇಳಿದ ಸಲಹೆಯನ್ನು ಪರಿಶೀಲಿಸುತ್ತೇನೆ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ : ಅಧ್ಯಕ್ಷರೆ ಪ್ರಶ್ನೆ ಸಂಖ್ಯೆ ಕೂಡ ಒಂದು ವಾರ ಟೈಮ್ ಬೇಕು ಎಂದು ಪತ್ರ ಬರೆದಿದ್ದೇನೆ.

ಶ್ರೀ ಸಾದತ್ ಅಲಿಖಾನ್ : ಹೋದ ವಾರ ಎರಡು ಪ್ರಶ್ನೆಗಳು ಬಂದಿದ್ದವು ಕ್ವೆಶ್ಚನ್‌ಗೆ ಮೂರು ವಾರ, ಇನ್ನೊಂದು ಕ್ವಶ್ಚನ್‌ಗೆ 2ವಾರ, ಈ ಕ್ವೆಶ್ಚನ್‌ಗೆ ಒಂದು ವಾರ ಟೈಂ ಕೇಳಿದ್ದಾರೆ. ಈ ಸರ್ಕಾರ ಕೆಲಸ ಮಾಡುತ್ತಿದಿಯೋ ಮಲಗಿದೆಯೋ ಏನೋ ಅರ್ಥವಾಗುತ್ತಿಲ್ಲ.

ಅಧ್ಯಕ್ಷರು : ಇಲ್ಲ, ಇಲ್ಲ. ಪ್ರೋಗ್ರೆಸೀವಾಗಿ ರೆಡ್ಯೂಸ್ ಆಗುತ್ತಿದೆ. ನೋಡಿ ಮೂರು ವಾರ ಎಂದು ಹೇಳಿದ್ದರು. ಅದು ಎರಡು ವಾರಕ್ಕೆ ಬಂತು. ಈಗ ಒಂದು ವಾರಕ್ಕೆ ಬಂದಿದ್ದಾರೆ. ಆದ್ದರಿಂದ ಕೆಲಸ ಮಾಡುತ್ತಿದೆ ಸರ್ಕಾರ. ಮುಂದಿನ ವಾರ ಬರುತ್ತದೆ.

ಕಾವೇರಿ ಜಲನಯನ ಪ್ರದೇಶಕ್ಕಾಗಿ ಆಯವ್ಯವ ಹಂಚಿಕೆ.

2477- ಶ್ರೀ ಬಿ.ಹೆಚ್. ಬನ್ನಿಕೋಡ್ (ಹಿರೇಕೆರೂರು) : ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1991-92ನೇ ಸಾಲಿನ ಆಯವ್ಯಯದಲ್ಲಿ ಕಾವೇರಿ ಜಲಾನಯನ ಪ್ರದೇಶದಲ್ಲಿ ಬರುವ ನೀರಾವರಿ ಕಾಮಗಾರಿಗಳಿಗೆ ಮೀಸಲ್ಪಟ್ಟಿರುವ ಹಣ ಎಷ್ಟು?

ಆ) ಸದರಿ ಯೋಜನೆಗಳು ಪೂರ್ಣಗೊಳ್ಳಲು ಅವಶ್ಯವಿರುವ ಹಣವೆಷ್ಟು?

ಇ) ಕೃಷ್ಣಾ ಜಲಾನಯನ ಪ್ರದೇಶದಲ್ಲಿ ಕರ್ನಾಟಕ ಹಕ್ಕಿನ ಪೂರ್ಣ ನೀರನ್ನು ಉಪಯೋಗಿಸಿಕೊಳ್ಳಲು ತೆಗೆದುಕೊಂಡಿರುವ ಹಾಗೂ ತೆಗೆದುಕೊಳ್ಳಬೇಕಾದ ಕಾಮಗಾರಿಗಳು ಯಾವುವು?

ಈ) ಕೃಷ್ಣಾ ಜಲಾನಯನ ಪ್ರದೇಶದ ಯಾವ ಯಾವ ಕಾಮಗಾರಿಗಳಿಗೆ 1991-92 ನೇ ಆಯವ್ಯವಯದಲ್ಲಿ ಎಷ್ಟೆಷ್ಟು ಹಣ ಮೀಸಲಿಡಲಾಗಿದೆ?

ಉ) ಸದರಿ ಯೋಜನೆಗಳನ್ನು ಪೂರ್ಣಗೊಳಿಸಲು ಅವಶ್ಯವಿರುವ ಹಣವೆಷ್ಟು?

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್(ಭಾರಿ ಹಾಗೂ ಮದ್ಯಮ ನೀರಾವರಿ ಸಚಿವರು):

ಅ) 140.47 ಕೋಟಿ ರೂ.ಗಳು.

ಆ) 1475 ಕೋಟಿ ರೂ.ಗಳು.

ಇ) ಯೋಜನಾವಾರು ವಿವರಗಳನ್ನು ಲಗತ್ತಿಸಿರುವ ಪಟ್ಟಿಯಲ್ಲಿ ಸೂಚಿಸಲಾಗಿದೆ.

ಈ) 3600 ಕೋಟಿ ರೂ.ಗಳು.

ಅನುಬಂಧ

ಕ್ರ. ಸಂ.	ಯೋಜನೆ	1991—92ನೇ ಆಯವ್ಯಯದಲ್ಲಿ ಮೀಸಲಿಟ್ಟ ಹಣ	ಯೋಜನೆಯನ್ನು ಪೂರ್ಣಗೊಳಿಸಲು ಬೇಕಾದ ಹಣ.
1	2	3	4
ಅ)	**ತೆಗೆದುಕೊಂಡಿರುವ ಯೋಜನೆಗಳು.**		
1.	ಕೃಷ್ಣಾ ಮೇಲ್ದಂಡೆ-1	107.00	1211.00
2.	ಹಿಪ್ಪರಗಿ	1.50	248.00
3.	ಘಟಪ್ರಭಾ-3	12.00	346.00
4.	ಮಲಪ್ರಭಾ	16.00	123.00
5.	ಬೆನ್ನತೋರಾ	3.50	57.00
6.	ಭದ್ರಾ	1.5513	30.00
7.	ತುಂಗಭದ್ರಾ	9.00	23.00
8.	ದುಧಗಂಗಾ	1.00	30.00
9.	ಅಮರಜಾ	3.50	28.00
10.	ಮುಲ್ಲಾಮಾರಿ ಮೇಲ್ದಂಡೆ	-	1.00
11.	ಮುಲ್ಲಾಮಾರಿ ಕೆಳದಕಂಡೆ	1.00	31.00
12.	ಹಿರೇಹಳ್ಳ	1.35	46.00
13.	ಮಸ್ಕಿನಾಲಾ	1.25	18.00
14.	ರಾಣಿಕೆರೆಪೂರಕನಾಲೆ	0.10	3.00
15.	ರಾಷ್ಟ್ರೀಯ ಜಲ ನಿರ್ವಹಣೆ ಯೋಜನೆ	9.60	27.00
16.	ಸಣ್ಣ ನೀರಾವರಿ	9.37	78.00
	ಒಟ್ಟು (ಅ)	178.7213	2300.00
ಅ)	**ತೆಗೆದುಕೊಳ್ಳಬೇಕಾದ ಕಾಮಗಾರಿಗಳು**		
1.	ಮಾರ್ಕಾಂಡೆಯ್ಯ	-	104.00
2.	ರಾಮತಾಲ್ ಲಿಫ್ಟ್	-	88.00
3.	ಭೀಮ್ ಪ್ಲೋ	-	108.00
4.	ಭೀಮಲಿಫ್ಟ್	-	63.00
5.	ಭದ್ರಾಮೇಲ್ದಂಡೆ	-	517.00
6.	ತುಂಗಾ ಮೇಲ್ದಂಡೆ	-	271.00

7.	ಗಂಡೋರಿ ನಾಲಾ	0.20	38.00
8.	ಮಹಾದಾಯಿ	-	83.00
9.	ಹೋಡಿರಾಯನ ಹಳ್ಳ	0.1487	3.00
10.	ಮದಗ ಮಸೂರ್	-	22.00
11.	ಭದ್ರಾಅಣೆಕಟ್ಟು ನವೀಕರಣ	1.00	3.00
	ಒಟ್ಟು ಆ	1.3487	1300.00
	ಒಟ್ಟು (ಅ+ಆ)	180.07	3600.00

* ಕೃಷ್ಣಾ ಜಲಾನಯನ ಪ್ರದೇಶದ ಏತ ನೀರಾವರಿ ನಿಗಮದ ಬೀಜ ಧನ 1 ಕೋಟಿ ರೂ.ಗಳು ಸೇರಿದೆ.

ಶ್ರೀ ಬಿ.ಎಚ್. ಬನ್ನಿಕೋಡ್ : ಮಾನ್ಯ ಅಧ್ಯಕ್ಷರೆ, ಕರ್ನಾಟಕ ರಾಜ್ಯದಲ್ಲಿ ಕಾವೇರಿ ಜಲಾನಯನ ಪ್ರದೇಶದಲ್ಲಿ ಬರತಕ್ಕ ನೀರಾವರಿ ಯೋಜನೆಗಳಿಗೆ ಒಟ್ಟು ಬೇಕಾಗತಕ್ಕ ಹಣ ಎಷ್ಟು? 1991-92ನೇ ಸಾಲಿನಲ್ಲಿ ಈ ಯೋಜನೆಗೆ ಇಟ್ಟಿರತಕ್ಕ ಹಣ ಎಷ್ಟು ಎಂಬ ಪ್ರಶ್ನೆಗೆ ಮಾನ್ಯ ಸಚಿವರು ಈ ಯೋಜನೆಗೆ ಬೇಕಾಗಿರತಕ್ಕದ್ದು 1475 ಕೋಟಿ ರೂಪಾಯಿಗಳು ಎಂದು ಹೇಳಿದ್ದಾರೆ.

ಕಾವೇರಿ ಜಲಾನಯನ ಪ್ರದೇಶದಲ್ಲಿ ಬರತಕ್ಕ ನೀರಾವರಿ ಯೋಜನೆಗಳನ್ನು ಪೂರ್ತಿಗೊಳಿಸುವುದಕ್ಕೆ ಈ ಸಾರಿ ಇಟ್ಟಿರತಕ್ಕದ್ದು ಕೇವಲ 140.47ಕೋಟಿ ರೂಪಾಯಿಗಳು. ಇದೇ ರೀತಿ ಕೃಷ್ಣಾ ಜಲಾನಯನ ಪ್ರದೇಶದಲ್ಲಿ ಬರತಕ್ಕ ನೀರಾವರಿ ಯೋಜನೆಗಳನ್ನು ಪೂರೈಸುವುದಕ್ಕೆ 3600 ಕೋಟಿ ರೂಪಾಯಿಗಳು ಬೇಕು. ಇದಕ್ಕೆ ಈ ಬಜೆಟ್‌ನಲ್ಲಿ ಮಿಸಲಿಟ್ಟಿರುವ ಹಣ 177 ಕೋಟಿ ರೂಪಾಯಿಗಳು ಮಾತ್ರ. ಮಾನ್ಯ ಅಧ್ಯಕ್ಷರೆ, ಈಗಾಗಲೇ ಕಾವೇರಿಯಲ್ಲಿ ರಾಜ್ಯದ ರೈತರಿಗೆ ಯಾವ ರೀತಿ ಅನ್ಯಾಯವಾಗಿದೆ ಎಂಬುದನ್ನು ಮಾನ್ಯ ಸಚಿವರು ಹಾಗೂ ಸರ್ಕಾರ ಗಮನಿಸಬೇಕು. ಮಂದರೀತಿಯಲ್ಲಿ ಹೋದರೆ ಈ ನೀರನ್ನು ಬಳಸಿಕೊಳ್ಳುವುದು ಯಾವಾಗ? ಈ ಯೋಜನೆಗಳನ್ನು ಪೂರ್ತಿ ಮಾಡುವುದು ಯಾವಾಗ? ಅದೇ ರೀತಿ 3600 ಕೋಟಿ ರೂಪಾಯಿಗಳು ಕೃಷ್ಣ ಜಲಾನಯನ ಪ್ರದೇಶದಲ್ಲಿ ಯೋಜನೆಗಳನ್ನು ಪೂರ್ತಿಗೊಳಿಸಲು ಬೇಕು. ಅವುಗಳಲ್ಲಿ ತುಂಗಾ ಮೇಲ್ದಂಡೆ ಯೋಜನೆಯನ್ನು ಈ ಸಾರಿ ಆಯವ್ಯಯದಲ್ಲಿ ಸೇರಿಸಿಲ್ಲ ಎಂದು ಮಾನ್ಯ ಸಚಿವರು ಇಲ್ಲಿ ಉತ್ತರ ಕೊಟ್ಟಿದ್ದಾರೆ. ರಾಜ್ಯದಲ್ಲಿ ಅತೀ ಮಹತ್ವವಾದುದು ತುಂಗಾ ಮೇಲ್ದಂಡೆ ಯೋಜನೆ.ಅದು ಅಣೆಕಟ್ಟು ಕಟ್ಟದೆ ಅಥವಾ ಮುಳುಗಡೆ ಆಗದೆ ಬಚಾವತ್ ಕಮಿಷನ್‌ನಲ್ಲಿ ಕೊಟ್ಟಿರುವ ನೀರಿನ ಹಕ್ಕನ್ನು ಸಹ ಬಳಸಿಕೊಳ್ಳುವುದಕ್ಕೆ ಯೋಜನೆ ಹಾಕಿಕೊಂಡಿಲ್ಲ. ಸರ್ಕಾರ ಈ ಯೋಜನೆಗಳನ್ನು ಪೂರೈಸಿ 2000 ಇಸವಿಯೊಳಗೆ ಬಚಾವತ್ ಆಯೋಗದ ವರದಿ ಪ್ರಕಾರ ಕೃಷ್ಣ ಜಲಾನಯನ ಪ್ರದೇಶದಲ್ಲಿ ನೀರನ್ನು ಉಪಯೋಗಿಸಬೇಕು. ಏನಾದರೂ ಸರ್ಕಾರ ಇದರ ಬಗ್ಗೆ ಯೋಚನೆಯನ್ನು ಮಾಡಿದೆಯೇ ಅಥವಾ ಕಣ್ಣೀರು ಸುರಿಸಿ ಜನರನ್ನು ತೃಪ್ತಿ ಪಡಿಸತಕ್ಕ ಕೆಲಸ ಸರ್ಕಾರ ಮಾಡಿದೆಯೋ? ನೀರನ್ನು ಬಳಸಿ ರೈತರಿಗೆ ಮತ್ತು ರಾಷ್ಟ್ರದ ಸಂಪತ್ತನ್ನು ಉತ್ಪಾದನೆ ಮಾಡುವ ವಿಚಾರ ಸರ್ಕಾರದಲ್ಲಿಯೇ ಎಂದು ತಮ್ಮ ಮೂಲಕ ಕೇಳುತ್ತಿದ್ದೇನೆ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ : ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರ ಕಳಕಳಿಯನ್ನು ನಾನು ಅರ್ಥ ಮಾಡಿಕೊಳ್ಳುತ್ತೇನೆ. ಈಗಾಗಲೇ ಉತ್ತರಿಸಿರುವ ಪ್ರಕಾರ ಈ ಸಾರಿ ಎರಡು ಜಲಾನಯನ ಪ್ರದೇಶಗಳಿಗೆ -ಕಾವೇರಿ ಜಲಾನಯನ ಪ್ರದೇಶಕ್ಕೆ

140 ಕೋಟಿ ಹಾಗೂ ಕೃಷ್ಣ ಜಲಾನಯನ ಪ್ರದೇಶಕ್ಕೆ 170 ಕ್ರೋಟಿ ರೂಪಾಯಿಗಳನ್ನು ಒದಗಿಸಲಾಗಿದೆ. ಅವರು ಕೇಳತಕ್ಕ ಯೋಜನೆಗೆ ವಿಶೇಷವಾದಂಥ ಹಣಕಾಸಿನ ನೆರವು ತೆಗೆದುಕೊಳ್ಳಬೇಕಾಗುತ್ತದೆ. ಆ ದೃಷ್ಟಿಯಿಂದ....

ಶ್ರೀ ಬಸವರಾಜ ರಾಯರೆಡ್ಡಿ : ಕಾವೇರಿಗೆ ಕೊಟ್ಟಿರುವುದು ಪ್ಲಾನೋ ಅಥವಾ ನಾನ್-ಪ್ಲಾನೊ ?

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ : 140 ಕೋಟಿ ರೂಪಾಯಿ ಕೊಟ್ಟಿದೆ. ಅದು ನಾನ್ -ಪ್ಲಾನ್ ಹೇಗಾಗುತ್ತದೆ? ಇದರಲ್ಲಿ ಮಾನ್ಯ ಬನ್ನಿಕೋಡ್ ಅವರ ವಿಷಯ ಏನಿದೆ ಅದರ ಬಗ್ಗೆ ಅವರನ್ನು ನಾನು ಸಮಕ್ಷಮವಾಗಿ ಕರೆಯಿಸಿ ಈ ಯೋಜನೆ ವಿಚಾರದಲ್ಲಿ ಏನು ಮಾಡಬೇಕು ಎಂಬ ಬಗ್ಗೆ ವಿಶೇಷವಾದಂಥ ವರದಿ ತೆಗೆದುಕೊಂಡು ಸರ್ಕಾರದ ಮೇಲ್ಮಟ್ಟದಲ್ಲಿ ವಿಶೇಷವಾದಂಥ ಕಾರ್ಯಕ್ರಮ ತೆಗೆದುಕೊಳ್ಳುತ್ತೇನೆ ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಶ್ರೀ ಬಿ.ಎಚ್. ಬನ್ನಿಕೋಡ್ : 3600 ಕೋಟಿ ರೂಪಾಯಿ ಕೃಷ್ಣ ಜಲಾನಯನ ಪ್ರದೇಶದ ನೀರಾವರಿ ಯೋಜನೆಗೆ ಬೇಕು ಎಂದು ಸಚಿವರೇ ಹೇಳಿದ್ದಾರೆ. 1475 ಕೋಟಿ ರೂಪಾಯಿಗಳು ಕಾವೇರಿ ಜಲಾನಯನ ಪ್ರದೇಶದ ನೀರಾವರಿಗೆ ಬೇಕು ಎಂದು ಹೇಳಿದ್ದಾರೆ.

ಇಲ್ಲಿ 140 ಕೋಟಿ ರೂಪಾಯಿಯನ್ನು ಕಾವೇರಿಗೂ ಹಾಗೂ 170 ಕೋಟಿ ರೂಪಾಯಿಗಳನ್ನು ಕೃಷ್ಣಾಕ್ಕೂ ಒದಗಿಸಲಾಗಿದೆ. ಈ ರೀತಿ ಹೋದರೆ ನಾವು ನಿರ್ದಿಷ್ಟವಾದ ವೇಳೆಯಲ್ಲಿ ನೀರಿನ ಬಳಕೆ ಮಾಡಿಕೊಳ್ಳುವುದಕ್ಕಾಗುವುದಿಲ್ಲ. ಇನ್ನಾದರೂ ಸರ್ಕಾರ ಇದನ್ನು ಬಳಕೆ ಮಾಡುವುದಕ್ಕೆ ವಿಚಾರ ಮಾಡಿದೆಯೇ? ಯೋಜನೆ ಇದೆಯೇ? ರಾಜ್ಯದ ಜನರ ಕಲ್ಯಾಣ, ರಾಜ್ಯದ ಅಭಿವೃದ್ಧಿ ಮಾಡಬೇಕೆನ್ನುವ ಅಭಿಪ್ರಾಯ ತಮ್ಮಲ್ಲಿ ಇದೆಯೇ? ಈ ಬಗ್ಗೆ ಯೋಚನೆ ಇದೆಯೇ ಎಂದು ಕೇಳಿದ್ದಕ್ಕೆ ತಮ್ಮಲ್ಲಿ ಉತ್ತರ ಇಲ್ಲ, ಮಾನ್ಯ ಮುಖ್ಯಮಂತ್ರಿಗಳೂ ಇಲ್ಲಿಯೇ ಇದ್ದಾರೆ. ಇಡೀ ರಾಜ್ಯದ ಹಿತದೃಷ್ಟಿಯಿಂದ ಈ ಬಗ್ಗೆ ತೀವ್ರವಾಗಿ ವಿಚಾರ ಮಾಡಬೇಕು. ಈ ಸದನ ಮತ್ತು ಸರ್ಕಾರ ಈ ಬಗ್ಗೆ ಯೋಜನೆ ತೆಗೆದುಕೊಳ್ಳುವುದಕ್ಕೆ ಯಾವ ಕಾರ್ಯಕ್ರಮ ಹಾಕಿಕೊಂಡಿದೆ ಎಂದು ನಾನು ಕೇಳುತ್ತೇನೆ.

ಶ್ರೀ ಮಲ್ಲಾರಿಗೌಡ ಎಸ್ ಪಾಟೀಲ್ : ಮಾನ್ಯ ಅಧ್ಯಕ್ಷರೇ, ಇದರ ಬಗ್ಗೆ ಈಗಾಗಲೇ ಕೇಂದ್ರ ಸರ್ಕಾರಕ್ಕೆ ನಾವು ಒಂದು ವಿನಂತಿಯನ್ನು ಮಾಡಿದ್ದೇವೆ. ಈ ಇರಿಗೇಷನ್ ಬಾಂಡ್ಸ್ ಬಗ್ಗೆ ಮತ್ತು ಕೇಂದ್ರ ಸರ್ಕಾರ ಕೂಡ ಈ ಒಂದು ಯೋಜನೆಗಳಿಂದ ಹೆಚ್ಚಿನ ಧನ ಸಹಾಯ ಕೊಡಬೇಕೆಂದು ಕರ್ನಾಟಕ ಸರ್ಕಾರದ ಪರವಾಗಿ ಕೇಳಿದ್ದೇವೆ. ಕೇಂದ್ರ ಸರ್ಕಾರದಿಂದ ಏನಾದರೂ ಹಣಕಾಸಿನ ನೆರವು ಬಂದರೆ ಸರಿಯಾದ ಸಮಯದಲ್ಲಿ ಮಾಡಬಹುದು. ಇಲ್ಲದಿದ್ದರೆ ಇರಿಗೇಷನ್ ಬಾಂಡ್ಸ್ ರಿಲೀಸ್ ಮಾಡುವುದಕ್ಕೆ ಪರವಾಗಿ ಕೊಟ್ಟರೆ ಈ ದಿಸೆಯಲ್ಲಿ ಕಾರ್ಯಕ್ರಮವನ್ನು ನಾವು ತೆಗೆದುಕೊಳ್ಳಬಹುದು. ಯಾವುದೇ ರೀತಿಯ ರಚನಾತ್ಮಕ ಸಲಹೆಯನ್ನು ಮಾನ್ಯ ಬನ್ನೀಕೋಡ್ ಅವರು ಈ ಬಗ್ಗೆ ಇಲ್ಲಿ ಕೊಡುವುದಾದರೆ ಅದನ್ನೂ ಕೂಡ ಸರ್ಕಾರ ಪರಿಗಣಿಸುತ್ತದೆ.

ಶ್ರೀ ವಿ.ಎಸ್. ಕೌಜಲಗಿ : ಮಾನ್ಯ ಮಂತ್ರಿಗಳು ಕೊಟ್ಟಿರುವ ಉತ್ತರದ ಪ್ರಕಾರ ಕೃಷ್ಣ ಮೇಲ್ದಂಡೆ ಯೋಜನೆಗೆ ಈ ವರ್ಷ 178 ಕೋಟಿ ರೂಪಾಯಿ ಪ್ರಾವಿಷನ್ ಮಾಡಿದ್ದೀರಿ. ಈ ಬಗ್ಗೆ ಜಾಗತಿಕ ಬ್ಯಾಂಕಿನಿಂದ ಬಂದ ನೆರವು ಎಷ್ಟು?

ಅದರಲ್ಲಿ ಎಷ್ಟು ಹಣ ಖರ್ಚು ಮಾಡಿದ್ದೀರಿ? 2000ನೇ ಇಸವಿಯ ಒಳಗೆ ಈ ಎಲ್ಲಾ ಯೋಜನೆಗಳನ್ನು ತಾವು ಪೂರ್ತಿಯಾಗಿ ಮಾಡುತ್ತೇವೆ ಎನ್ನುವ ಭರವಸೆಯನ್ನು ಈ ಸದನಕ್ಕೆ ಕೊಡುತ್ತೀರಾ?

ಶ್ರೀ ಮಲ್ಲಾರಿಗೌಡ ಎಸ್ ಪಾಟೀಲ್ : ಮಾನ್ಯ ಅಧ್ಯಕ್ಷರೇ, ಮಾನ್ಯ ಕೌಜಲಗಿಯವರು ಕೇಳಿದ ಪ್ರಶ್ನೆಗೆ ನಾನು ಈಗಾಗಲೇ ಈ ಯೋಜನೆಗೆ ಸಂಬಂಧಪಟ್ಟ ಹಾಗೇ ವಿವರಗಳನ್ನು ಸಭೆಯ ಮುಂದೆ ಕೊಟ್ಟಿದ್ದೇನೆ. ಎಷ್ಟು ಖರ್ಚುಮಾಡಿದ್ದೇವೆ ಹಾಗೂ ಎಷ್ಟು ಖರ್ಚುಮಾಡಬೇಕಾಗಿದೆ ಎಂಬುದನ್ನು ಕೊಟ್ಟಿದ್ದೇನೆ. ಅವರ ಪ್ರಶ್ನೆ ಏನೆಂದರೆ ಇನ್‌ಟೈಮ್‌ಲಿ ಅದನ್ನು ಪೂರ್ತಿ ಮಾಡುತ್ತೀರಾ ಎನ್ನುವ ಅಭಿಪ್ರಾಯದಲ್ಲಿ ಕೇಳಿದ್ದಾರೆ. ಆ ಅಭಿಪ್ರಾಯಕ್ಕೆ ಸರ್ಕಾರ ಸ್ಪಂದಿಸುತ್ತದೆ. ಒಂದು ಹಿನ್ನೆಲೆಯಲ್ಲೇ ನಾನು ಹೇಳಿದೆ. ಏನಾದರೂ ಇರಿಗೇಷನ್ ಬಾಂಡ್ಸ್‌ಗೆ ನಮಗೆ ಅವಕಾಶ ಸಿಕ್ಕಿದರೆ ಇನ್‌ಟೈಮ್‌ನಲ್ಲಿ ಮುಗಿಸಬಹುದು. ಇಲ್ಲಿ ಕೃಷ್ಣ ಯೋಜನೆಯ ಬಗ್ಗೆ ಪ್ರಶ್ನೆ ಇಲ್ಲ, ಏಕೆಂದರೆ ಜಾಗತಿಕ ಬ್ಯಾಂಕಿನಿಂದ ಅದಕ್ಕೆ ನೆರವನ್ನು ಪಡೆಯುತ್ತಿದ್ದೇವೆ. ಸರ್ಕಾರ ಏನು ಖರ್ಚುಮಾಡುತ್ತದೆಯೋ ಅದನ್ನು ಜಾಗತಿಕ ಬ್ಯಾಂಕ್ ರೀಇಂಬರ್ಸ್ ಮಾಡುವ ಕಾರ್ಯಕ್ರಮ ಇದೆ. ಇನ್ನೂ ಹೆಚ್ಚಿನ ಹಣಕಾಸಿನ ವ್ಯವಸ್ಥೆ ಬೇಕಾದರೆ ನಾವುಬಾಂಡ್ ಮಾಡಿ ಮುಗಿಸಬೇಕಾಗುತ್ತದೆ. ಬೇಗ ನಾವು ಕೆಲಸಕಾರ್ಯಗಳನ್ನು ಮುಗಿಸಬೇಕಾಗುತ್ತದೆ. ಇಷ್ಟು ಮಾತ್ರ ನಾನು ಹೇಳುತ್ತಿದ್ದೇನೆ.

ಶ್ರೀ ಬಾಬಾಗೌಡ ಆರ್. ಪಾಟೀಲ್ : ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ಈಗಾಗಲೇ ಬೆಳಗಾಂಗೆ ಬಂದು ಒಂದು ಭಾಷಣ ಮಾಡಿದ್ದಾರೆ. ಅಲ್ಲಿ 2000ನೇ ಇಸವಿಯ ಒಳಗೆ ಪೂರ್ತಿಮಾಡುತ್ತೇವೆ ಎಂದು ಹೇಳಿದ್ದಾರೆ . ಈಗಿನ ಅಂಕಿಅಂಶ ನೋಡಿದರೆ ಬಹುತೇಕ ಈ ಹಣದಿಂದ ಈ ಯೋಜನೆಯನ್ನು ಬಹುತೇಕಮಾಡುವುದಕ್ಕಾಗುವುದಿಲ್ಲ ಜಾದ ಮಾಡಿ ಏನಾದರು ಮಾಡುತ್ತಾರೆಯೇ?

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ : ಜಾದೂಗೀದೂ ಮಾಡತಕ್ಕದ್ದು ಸರ್ಕಾರದ ಕಡೆ ಇರುವುದಿಲ್ಲ, ಜಾದೂ ಮಾಡುವಂಥದ್ದು ಅವರು ಏನಾದರೂ ಹೇಳಿದರೆ ನಾವು ಮಾಡುತ್ತೇವೆ.

ಶ್ರೀ ಬಾಬಾಗೌಡ ಆರ್. ಪಾಟೀಲ್ : ಈ ಅಂಕಿಸಂಖ್ಯೆಗೂ ಮಾನ್ಯ ಮಂತ್ರಿಗಳು ಹೇಳುವ 2000ನೇ ಇಸವಿಗೂ ಏನೂ ಸಂಬಂಧಇಲ್ಲ. 3 ಸಾವಿರದ ನೂರುಕೋಟಿ ಭೇಕಾಗುವ ಕಡೆ ಈ ವರ್ಷ 140 ಕೋಟಿಇಡಲಾಗಿದೆ. ಇನ್ನು ಈ ಯೋಜನೆಯನ್ನು ಕಂಪ್ಲೀಟ್ ಮಾಡಬೇಕಾದರೆ ಮುಂದಿನ 4 ವರ್ಷಗಳಲ್ಲಿ 3,600 ಕೋಟಿ ರೂ. ಖರ್ಚು ಮಾಡಬೇಕಾಗುತ್ತದೆ. ಇದರಿಂದ 2000 ಇಸವಿ ಒಳಗೆ ಕೆಲಸ ಪ್ರಾರಂಭ ಮಾಡುವುದಕ್ಕಾಗುವುದಿಲ್ಲ. ಆದುದರಿಂದ ಮಾನ್ಯ ಮಂತ್ರಿಗಳು ಇಂತಹ ಭಾಷಣಗಳನ್ನು ಮಾಡುವುದನ್ನು ಬಂದ್ ಮಾಡುತ್ತಾರೆಯೇ?

ಶ್ರೀ ಮಲ್ಲಾರಿಗೌಡ ಎಸ್ ಪಾಟೀಲ್ : ಮಾನ್ಯ ಅಧ್ಯಕ್ಷರೇ, ಬಾಬಾಗೌಡ ಪಾಟೀಲರು ಹೇಳಿದರು ನಾನು ಏನೋ ಭಾಷಣ ಮಾಡಿದ್ದೇನೆ ಎಂದು, ನಾನು ಎಂ ಎಲ್ ಎ ಆಗಿದ್ದಾಗ ಭಾಷಣ ಮಾಡಿರಬಹುದು. ಆದರೆ ಮಂತ್ರಿಯಾದ ಮೇಲೆ ಭಾಷಣ ಮಾಡುವುದನ್ನು ಸ್ವಲ್ಪ ಕಡಿಮೆ ಮಾಡಬೇಕಾಗುತ್ತದೆ. ಈ ಯೋಜನೆ ಬಗ್ಗೆ ಸದಸ್ಯರಿಗೆ ಏನು ಕಳಕಳಿ ಇದೆ ಅದೇ ಕಳಕಳಿ ಸರ್ಕಾರಕ್ಕೂ ಇದೆ. ಯೋಗ್ಯವಾದ ಸಲಹೆಗಳನ್ನು ಅವರು ಕೊಟ್ಟರೆ ಸರ್ಕಾರ ಆ ಬಗ್ಗೆ ವಿಶೇಷವಾದ ಕಾರ್ಯಕ್ರಮಗಳನ್ನು ತೆಗೆದುಕೊಳ್ಳುತ್ತದೆ. ಮಾನ್ಯ ಮುಖ್ಯಮಂತ್ರಿಗಳೂ ಸಹಾ ಈ

ದಿಸೆಯಲ್ಲಿ ಹೆಜ್ಜೆ ಹಾಕುತ್ತಿದ್ದಾರೆ. ಸರ್ಕಾರಕೂಡ ಈ ಬಗ್ಗೆ ಹೆಜ್ಜೆ ಇಡುತ್ತಿದೆ. ಕಳೆದ ಸಲ ಏನು ಹಣಕಾಸಿನ ವ್ಯವಸ್ಥೆ ಇತ್ತೋ ಅದಕ್ಕಿಂತಲೂ ಹೆಚ್ಚಿನ ಹಣಕಾಸಿನ ವ್ಯವಸ್ಥೆಯನ್ನು ಈ ಸಲ ನಾವು ಮಾಡಿದ್ದೇವೆ. ಈ ಬಗ್ಗೆ ನಾನು ಮುಖ್ಯ ಮಂತ್ರಿಗಳಿಗೆ ಕೂಡ ಧನ್ಯವಾದಗಳನ್ನು ಹೇಳುತ್ತಿದ್ದೇನೆ.

ಶ್ರೀ ಎ.ಬಿ. ಜಕನೂರ್ : ಮಾನ್ಯ ಅಧ್ಯಕ್ಷರೆ, ಹಿಪ್ಪರಗಿ ಯೋಜನೆ ಅಡಿಯಲ್ಲಿ ಬರತಕ್ಕಪ್ರಾಜೆಕ್ಟ್‌ಗಳಿಗೆ 248ಕೋಟಿ ರೂಪಾಯಿಗಳನ್ನು ಖರ್ಚು ಮಾಡಲಾಗುವುದು ಎಂದು ಮಾನ್ಯ ಮಂತ್ರಿಗಳು ಹೇಳಿದ್ದಾರೆ. ನಾವು ಸರ್ಕಾರದಲ್ಲಿ ವಿನಂತಿ ಮಾಡಿಕೊಂಡಿದ್ದೇವೆ, 248ಕೋಟಿ ರೂಪಾಯಿಗಳನ್ನು ಖರ್ಚು ಮಾಡುವುದು ಬೇಡ. ಅದಕ್ಕೆ ಹಣ ಬಹಳ ಖರ್ಚಾಗುತ್ತದೆ. ಆದ್ದರಿಂದ ನೀರನ್ನು ಸ್ಟೋರೇಜ್ ಮಾಡಿ ಎಂದು ಹೇಳಿದ್ದೇವೆ. Entire Command area has been brought under Irrigation by ryots by their own Pumpsets. ಅದಕ್ಕೆ ನೀರು ಇರುವುದಿಲ್ಲ, ಸ್ಟೋರೇಜ್ ಅಷ್ಟೆ ಮಾಡಿ ಅದರ ಬಗ್ಗೆ ಕ್ಯಾಲ್ಕುಕುಲೇಷನ್ ಮಾಡಿಸಿ 54ಕೋಟಿ ರೂಪಾಯಿ ಬೇಕೆಂದು ಹೇಳಿದ್ದಾರೆ. ಈಗ ಅದಕ್ಕಾಗಿ ನಾಲ್ಕೈದು ಕೋಟಿ ರೂಪಾಯಿ ಖರ್ಚಾಗಿದೆ. ಇನ್ನು 50ಕೋಟಿ ರೂಪಾಯಿಗಳನ್ನು 3-4 ವರ್ಷಗಳಲ್ಲಿ ಖರ್ಚುಮಾಡಿದರೆ ಬ್ಯಾರೇಜ್ ಕಂಪ್ಲೀಟ್ ಆಗುತ್ತದೆ. ಮಾನ್ಯ ಮುಖ್ಯಮಂತ್ರಿಗಳು ಮಾರ್ಚಿಯಲ್ಲಿ ಇದೇ ಸದನದಲ್ಲಿ ಹಿಪ್ಪರಗಿ ಪ್ರಾಜೆಕ್ಟ್‌ಗೆ ಈ ವರ್ಷ ಎಷ್ಟು ಖರ್ಚು ಮಾಡಲಿಕ್ಕೆ ಶಕ್ಯವಿದೆಯೇ 10-12 ಕೋಟಿ ರೂಪಾಯಿಯೇ ಅಷ್ಟು ಹಣವನ್ನು ಒದಗಿಸಿದ್ದೇವೆಂದು ಹೇಳಿದ್ದಾರೆ. 1991-92ನೇ ಸಾಲಿನಲ್ಲಿ ಅದಕ್ಕಾಗಿ ಇಟ್ಟ ಹಣ 1 ಕೋಟಿ 50 ಲಕ್ಷ. ಅಂದರೆ ಇದು ಆಫೀಸರ್ಸ್, ಪಗಾರಕ್ಕೆ ಸಾಗಾಗುವುದಿಲ್ಲ, ಅವರ ಸಂಬಳಕ್ಕೆ ಮಾತ್ರ ಆಗುತ್ತದೆ ಏನು ಕೆಲಸ ಆಗುವುದಿಲ್ಲ, ಇದಕ್ಕೆ ಹೆಚ್ಚು ಹಣವನ್ನು ಇರುತ್ತಾರೆಯೇ ಹೇಗೆ? 10 ಕೋಟಿ ರೂಪಾಯಿ ಇಟ್ಟರೆ ಸರಿಯಾಗುತ್ತದೆ. ಅದು ನಾಲ್ಕು ವರ್ಷಗಳಿಗೆ ಸಾಕಾಗುತ್ತದೆ.

ಶ್ರೀ ಎಂ.ಎಸ್. ಪಾಟೀಲ್ ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಾದ ಜಕನೂರುರವರು ಹೇಳಿದ ಪ್ರಕಾರ ಬಚಾವತ್ ಆವಾರ್ಡ್ ಪ್ರಕಾರ ಕೃಷ್ಣಾ ಬೇಸಿನ್‌ನ ನೀರಿನ್ನು ಉಪಯೋಗ ಮಾಡಿಕೊಳ್ಳಬೇಕಾಗುತ್ತದೆ. ಆ ದೃಷ್ಟಿಯಿಂದ ಈ ವಿಷಯವನ್ನು ನಾನು ಇಲ್ಲಿ ಪ್ರಸ್ತಾಪ ಮಾಡಿದ್ದೇನೆ. ಅವರು ಹೇಳುತ್ತಿದ್ದಾರೆ. ಖಡಿಮೆ ಹಣವನ್ನು ಖರ್ಚು ಮಾಡಬೇಕೆಂದು ಕಡಿಮೆ ಹಣವನ್ನು ಕಡಿಮೆ ಖರ್ಚು ಮಾಡುವುದರಿಂದ ನೀರಿನ ಉಳಿತಾಯವಾಗುತ್ತದೆ. ಆದರೆ ಅದನ್ನು ಬೇರೆ ಯಾವುದೇ ಯೋಜನೆಯಲ್ಲಿ ಉಪಯೋಗ ಮಾಡಿಕೊಳ್ಳುವುದಕ್ಕಾಗುವುದಿಲ್ಲ. ಈ ದೃಷ್ಟಿಯಿಂದ ನಾವು ಯೋಜನೆಗಳ ಪ್ರಕಾರವೇ ಹೋಗಬೇಕಾಗುತ್ತದೆ. ಇವತ್ತು ಆಯೋಜನೆಗೆ 1.50 ಲಕ್ಷ ರೂಪಾಯಿಗಳನ್ನು ಏನು ಇದೆ. ಅದನ್ನು ಜಾಸ್ತಿ ಮಾಡಬೇಕೆಂದು ನಾನು ಮಾನ್ಯ ಸದಸ್ಯರ ಪರವಾಗಿ ಮುಖ್ಯಮಂತ್ರಿಗಳಲ್ಲಿ ಮನವಿಯನ್ನು ಅರ್ಪಿಸುತ್ತೇನೆ. ಹೆಚ್ಚಿನ ಹಣವನ್ನು ಕೊಡುವುದಕ್ಕೆ ವ್ಯವಸ್ಥೆ ಮಾಡಬೇಕೆಂದು ಮತ್ತೊಮ್ಮೆ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಬಿ.ಹೆಚ್. ಬನ್ನಿಕೋಡ್ : ಮಾನ್ಯ ಮುಖ್ಯಮಂತ್ರಿಗಳು ಸಭೆಯಲ್ಲಿದ್ದಾರೆ. ಅವರು ಈ ರಾಜ್ಯದ ಪ್ರಶ್ನೆಯ ಬಗ್ಗೆ ಏನಾದರೂ ಈಗ ಹೇಳಬೇಕು.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ಬಚಾವತ್ ಆವಾರ್ಡ್ ಪ್ರಕಾರ 2000 ದ ಇಸವಿಯ ಹೊತ್ತಿಗೆ ನಮ್ಮ ಯೋಜನೆಗಳೆಲ್ಲಾ ಮುಗಿಯಬೇಕು. ಈ ನಿಗದಿಯಾದ ಕಾಲವನ್ನು ಏನು ಗೊತ್ತುಮಾಡಲಾಗಿದೆ. ಎಂದು ತಾವು ಮತ್ತು

ಆಂಧ್ರಪ್ರದೇಶದ ಮುಖ್ಯಮಂತ್ರಿಗಳು ಇಬ್ಬರು ಒಂದೆಡೆಕುಳಿತು ಮಾತುಕತೆಯನ್ನು ಅಡಿ ಆಕಾಲವನ್ನು ಬದಲಾವಣೆ ಮಾಡಬೇಕು. ಹಿಂದಿನ ಮುಖ್ಯಮಂತ್ರಿಗಳಾದ ವೀರೇಂದ್ರಪಾಟೀಲ್ ರವರು ಮೈಸೂರಿನಲ್ಲಿ ಒಂದು ಸಭೆಯನ್ನು ಸೇರಿಸಿದ್ದರು. ಅಲ್ಲಿಯೂ ಕೃಷ್ಣಾ ಬೇಸಿನ್ ನಲ್ಲಿ ಬರತಕ್ಕ ಯೋಜನೆಗಳನ್ನು ಬಚಾವತ್ ಅವಾರ್ಡ್ ಪ್ರಕಾರ 2000ದ ಇಸವಿಯೊಳಗೆ ಮುಗಿಸಿಕೊಳ್ಳಬೇಕೆನ್ನುವ ಕಾಲಮಿತಿ ಏನಿದೆ. ಆ ಕಾಲಮಿತಿಯನ್ನು ಹಾಕದ ರೀತಿಯಲ್ಲಿ ಮಾತುಕತೆ ಆಡಬೇಕೆಂದು ಅವರು ಮಾಡಿದ್ದಾರೆ. ಆಂಧ್ರಪ್ರದೇಶದ ಮುಖ್ಯಮಂತ್ರಿಗಳ ಜೊತೆಯಲ್ಲಿ ಸೌಹಾರ್ದಯುತವಾದ ಮಾತುಕತೆಯಲ್ಲಿ ಇದನ್ನುಬಗೆಹರಿಸಿಕೊಳ್ಳುವ ಯೋಜನೆಯನ್ನು ತಾವು ಮಾಡಿದ್ದೀರ? ನಾವು ಪತ್ರಿಕೆಗಳಲ್ಲಿ ಓದಿರುವ ಪ್ರಕಾರ ಕಾವೇರಿ ಜಲಾನಯನ ಯೋಜನೆಗಳ ಬಗ್ಗೆ ಸುಪ್ರೀಂ ಕೋರ್ಟ್‌ನವರು ಈಗಾಗಲೇ ಎರಡೂ ರಾಜ್ಯಗಳು ಕುಳಿತು ಮಾತುಕತೆ ನಡೆಸುವುದರ ಮೂಲಕ ಈ ವಿವಾದವನ್ನು ಬಗೆಹರಿಸಿ ಕೊಳ್ಳಬೇಕೆಂದು ಹೇಳಿದ್ದಾರೆ. ಈ ಬಗ್ಗೆ ಸರ್ಕಾರದ ನಿಲುವೇನು ಎಂಬುದನ್ನು ದಯಮಾಡಿ ಸಭೆಗೆ ತಿಳಿಸಬೇಕೆಂದು ಮಾನ್ಯ ಮುಖ್ಯಮಂತ್ರಿಗಳವರಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಪಿ.ಜಿ. ಆರ್. ಸಿಂಧ್ಯ ಮಾನ್ಯ ಸಭಾಧ್ಯಕ್ಷರೆ, ತಮ್ಮ ಅನುಮತಿಯನ್ನು ಕೋರಿ, ನಾನು ಒಂದು ಉಪ-ಪ್ರಶ್ನೆಯ ರೀತಿಯಲ್ಲಿ ಈ ಒಂದು ವಿಚಾರವನ್ನು ಪ್ರಸ್ತಾಪ ಮಾಡುವುದಕ್ಕೆ ಬಯಸುತ್ತೇನೆ. ಮಾನ್ಯ ಮುಖ್ಯಮಂತ್ರಿಗಳಿಂದ ಇದರ ಬಗ್ಗೆ ಉತ್ತರವನ್ನು ಸಹ ನೀರಿಕ್ಷಿಸಿಮಾಡುತ್ತೇನೆ. ನಾಳೆ ಸುಪ್ರೀಂಕೋರ್ಟ್‌ನಲ್ಲಿ ಕಾವೇರಿ ಜಲವಿವಾದ ನೀರಿನ ವಿಚಾರವನ್ನು ಪ್ರಸ್ತಾಪ ಮಾಡತಕ್ಕ ಸಂದರ್ಭದಲ್ಲಿ ತಮಿಳುನಾಡು, ಕರ್ನಾಟಕ,ಪಾಂಡಿಚೇರಿ ಎಲ್ಲಾ ಸಂಬಂಧಪಟ್ಟ ರಾಜ್ಯಗಳು ಇದಕ್ಕೆ ರಾಜೀಸೂತ್ರವೇ ಉಪಯೋಗವೆನ್ನುವ ಸಲಹೆಯನ್ನು ನಮ್ಮ ಮುಂದೆ ಇಟ್ಟಿದ್ದಾರೆ. ಈ ಸಂದರ್ಭದಲ್ಲಿ ಈ ಸಭೆಯ ಹೊರಗಡೆ ತಾವು ಈ ಹೇಳಿಕೆಯನ್ನು ಸ್ವಾಗತ ಮಾಡಿದ್ದೀರಿ, ಇದೇ ರೀತಿಯಲ್ಲಿ ಸರ್ವಪಕ್ಷಗಳ ಎಲ್ಲಾ ನಾಯಕರು ಇವತ್ತು ಸಮಾಲೋಚನೆ ಮಾಡಿದ್ದಾರೆ, ನಾವು ನಮ್ಮ ಅಭಿಪ್ರಾಯಗಳನ್ನು ಹೇಳಿದ್ದೇವೆ. ಆ ವಿಚಾರವನ್ನು ತಮಿಳುನಾಡಿನ ವಕೀಲರಾದ ಪರಸಾನ್‌ರವರು ಸುಪ್ರೀಂ ಕೋರ್ಟಿನಲ್ಲಿ ಹೇಳಿದಾಗ, ಮತ್ತೊಮ್ಮೆ ಸುಪ್ರೀಂಕೋರ್ಟ, ತಮಿಳುನಾಡು ಮಾತುಕತೆಯ ಮೂಲಕ ಈ ಸಮಸ್ಯೆಯನ್ನು ಬಗೆಹರಿಸಿಕೊಳ್ಳುವುದಕ್ಕೆ ಮನಸ್ಸು ಮಾಡಬೇಕೆಂದು ಹೇಳಿದ್ದಾರೆ. ಎಲ್ಲಾ ಪಕ್ಷಗಳ ಮುಖಂಡರು ಸೇರಿದಂತಹ ಸಭೆಯ ಹಿನ್ನೆಲೆಯನ್ನು ತಾವು ಸದನಕ್ಕೆ ಹೇಳಬೇಕಾಗುತ್ತದೆ. ತಮ್ಮ ರಾಜಿಸೂತ್ರವೇನು ಮತ್ತು ನಿಮ್ಮ ಅಭಿಪ್ರಾಯ ಏನೆಂಬುದನ್ನು ತಾವು ಹೇಳಬೇಕಾಗುತ್ತದೆ. ನಮ್ಮ ಅಭಿಪ್ರಾಯಗಳನ್ನು ನಾವು ಈಗಾಗಲೇ ಸಭೆಯಲ್ಲಿ ತಿಳಿಸಿದ್ದೇವೆ. ಕೆಲವು ವಿಚಾರಗಳನ್ನು ಇಲ್ಲಿ ಹೇಳುವುದಕ್ಕಾಗುವುದಿಲ್ಲ. ಇದರ ಹಿನ್ನೆಲೆಯಲ್ಲಿ ನಾನು ತಮ್ಮಿಂದ ಹೇಳಿಕೆಯನ್ನು ಬಯಸುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೆ, ಕಾವೇರಿ ಜಲಾನಯನ ವಿಷಯದಲ್ಲಿ ಸುಪ್ರೀಂಕೋರ್ಟ್ ಮಾತುಕತೆಯ ಮೂಲಕ ಸಮಸ್ಯೆಯನ್ನು ಬಗೆಹರಿಸಿಕೊಳ್ಳಬೇಕೆಂದು ಹೇಳಿದೆ. ಇದು ಇನ್ನೂ ಚರ್ಚೆಯಾಗುತ್ತಿದೆ. ಈ ಮಧ್ಯದಲ್ಲಿ ಟ್ರಿಬ್ಯುನಲ್ ಮಧ್ಯಂತರ ಆಜ್ಞೆಯನ್ನು ಸಹ ಕೊಟ್ಟಿದೆ. ಇವೆಲ್ಲವನ್ನು ಗಮನದಲ್ಲಿಟ್ಟುಕೊಂಡು ಇವತ್ತು ಕಾವೇರಿ ಮತ್ತು ಕೃಷ್ಣಾ ಬೇಸಿನ್‌ಗಳಲ್ಲಿ ಬರತಕ್ಕ ಎಲ್ಲಾ ಕಾರ್ಯಕ್ರಮಗಳ ಪೂರ್ತಿ ಮಾಡುವ ದೃಷ್ಟಿಯಿಂದ ಅದಕ್ಕೆ ಬೇಕಾದ ಹಣವನ್ನು ಬಿಡುಗಡೆ ಮಾಡಬೇಕು. ಹಣವನ್ನು ಹೆಚ್ಚಿಗೆ ಕೊಡದಿರುವುದರಿಂದ ಈ ಕಾರ್ಯ ಮುಂದೆ ಹೋಗುತ್ತಾ ಇದೆ.

ಈ ಸಾರಿಯಾದರೂ ಇದಕ್ಕೆ ನಿಶ್ಚಿತವಾಗಿ ಬೇಕಾದ ಹಣ ಬಿಡುಗಡೆ ಮಾಡಿ, ಕೇವಲ ಸುಪ್ರೀಂ ಕೋರ್ಟ್ ತೋರಿಸದೇ ಕಾವೇರಿ ಟ್ರಿಬ್ಯುನಲ್‌ನ್ನು ತೋರಿಸದೇ ರೈತರಿಗೆ ನೀರು ಕೊಡುವ ದೃಷ್ಟಿಯಿಂದ ತಾವು ಏನಾದರೂ ಕಾರ್ಯಕ್ರಮ ರೂಪಿಸುತ್ತೀರಾ ಎನ್ನುವ ಈ ನನ್ನ ಪ್ರಶ್ನೆಯನ್ನು ಇದರ ಜೊತೆಗೆ ಸೇರಿಸುತ್ತೇನೆ.

ಅಧ್ಯಕ್ಷರು : ಈ ಪ್ರಶ್ನೆಯನ್ನು ಪ್ರಶ್ನೋತ್ತರ ಕಾಲ ಕಳೆದ ಮೇಲೆ....

(ಗೊಂದಲ)

ಅಧ್ಯಕ್ಷರು : ಪ್ರಶ್ನೋತ್ತರ ಕಾಲದಲ್ಲಿ ಹೇಳಿಕೆ ಕೊಡುವುದಕ್ಕೆ ಬರುವುದಿಲ್ಲ. ಪ್ರಶ್ನೆಗೆ ಮಾತ್ರ ಕೊಡಬಹುದು. ಪ್ರಶ್ನೆಗೆ ವಿಸ್ತಾರವಾದ ರೀತಿಯಲ್ಲಿ ಹೇಳಿಕೆಯನ್ನು ಕೊಡಬೇಕೆಂದು ಬಯಸುತ್ತಿದ್ದಾರೆ. ಆದ್ದರಿಂದ ಪ್ರಶ್ನೋತ್ತರ ಕಳೆದ ಮೇಲೆ...

ಶ್ರೀ ಎಸ್. ಬಂಗಾರಪ್ಪ : ತಾವು ಅನುಮತಿ ಕೊಟ್ಟರೆ ಪ್ರಶ್ನೋತ್ತರ ಕಳೆದ ಮೇಲೆ ಮಾನ್ಯ ವಿರೋಧಪಕ್ಷದ ಉಪನಾಯಕರು,ಶ್ರೀ ವಾಟಳ್ ನಾಗರಾಜ್ ಅವರು ಶ್ರೀ ಯಡಿಯೂರಪ್ಪನವರು ಏನುಪ್ರಶ್ನೆ ಮಾಡಿದ್ದಾರೆ.ಅದಕ್ಕೆ ಪ್ರತ್ಯೇಕ ಹೇಳಿಕೆಯನ್ನು ಕಾವೇರಿ ವಿಚಾರದಲ್ಲಿ ಕೊಡುತ್ತೇನೆ. as far as funds to Krishna water.

ಆ ವಿಚಾರದಲ್ಲಿ ನನಗೆ ಅವಕಾಶ ಕೊಟ್ಟರೆ ಒಂದು ವಿಚಾರವನ್ನು ಹೇಳಬೇಕೆಂದು ಆಸೆ ಇದೆ. ಶ್ರೀ ಬಿ.ಎಸ್.ಯಡಿಯೂರಪ್ಪ : ಕೃಷ್ಣಾ ಬೇಸಿನ್‌ನಲ್ಲಿ ದುಡ್ಡು ಬಿಡುಗಡೆ ಮಾಡುವುದಕ್ಕೆ ವಿಶೇಷವಾದ ಗಮನ ಕೊಡುತ್ತೀರಾ? ಎಲ್ಲಾ ಕಾರ್ಯಕ್ರಮ ನಿಂತು ಹೋಗಿದೆ. ಎಂದು ಎಲ್ಲರೂ ಹೇಳುತ್ತಾರೆ.

ಶ್ರೀ ಶಿವಾನಂದರ ಎಚ್. ಕೌಜಲಗಿ : ಕೃಷ್ಣಾ ಪ್ರಾಜೆಕ್ಟ್‌ಗೆ ವರ್ಲ್ಡ್ ಬ್ಯಾಂಕ್ ನವರು

ಅಧ್ಯಕ್ಷರು : ನೀರಾವರಿ ಬಗ್ಗೆ ಬೇಡಿಕೆ ಬರುತ್ತಿದೆ. ಅದರ ಮೇಲೆ ವಿವರವಾಗಿ ಚರ್ಚೆ ಮಾಡಿ.

(ಗೊಂದಲ)

ಶ್ರೀ ಸಿ. ಬೈರೇಗೌಡ : ಇದಕ್ಕೆ ಪ್ರತಿವರ್ಷ 200 ಕೋಟಿ ರೂಪಾಯಿ ಬಿಡುಗಡೆ ಮಾಡಬೇಕೆಂದು ತೀರ್ಮಾನವಾಗಿದೆ. ಆದರೆ ಕೇವಲ 178ಕೋಟಿ ಮಾತ್ರ ಬಿಡುಗಡೆ ಮಾಡಿದ್ದಾರೆ. ಅಪ್ಪರ್ ಕೃಷ್ಣಾ ಬಗ್ಗೆ ನಾನು ಹೇಳುತ್ತಿರುವುದು. ಪ್ರತಿವರ್ಷ 200 ಕೋಟಿ ಬಿಡುಗಡೆಯಾಗಬೇಕು. ಹಾಗೆಂದು ತೀರ್ಮಾನವಾಗಿದೆ. ಸದನದಲ್ಲಿ ತೀರ್ಮಾನ ಆಗಿದ್ದರೂ ಸಹ ಈ ವರ್ಷ ಬಿಡುಗಡೆ ಮಾಡಿರತಕ್ಕದ್ದು, ಬಜೆಟ್‌ನಲ್ಲಿ ಸೇರಿಸಿರತಕ್ಕದ್ದು ಕೇವಲ 178ಕೋಟಿ ರೂಪಾಯಿಗಳು ಈ ವಿಚಾರದಲ್ಲಿ ತಾವು ಏನು ಹೇಳುತ್ತೀರಿ?

ಪ್ರೊ. ಎಂ.ಡಿ. ನಂಜುಂಡಸ್ವಾಮಿ : ನನಗೆ ಒಂದು ಸ್ಪಷ್ಟೀಕರಣಬೇಕಾಗಿದೆ. ಏಕೆಂದರೆ ಇಲ್ಲಿ ಪ್ರಶ್ನೆ ಕೇಳಿರುವುದಕ್ಕೂ, ಉತ್ತರ ಕೊಟ್ಟಿರುವುದಕ್ಕೂ ಸ್ವಲ್ಪ ಸಂಬಂಧ ಸರಿಯಾಗಿ ಇಲ್ಲ. ಪ್ರಶ್ನೆ ಇರುವುದು "What are the projects taken up and proposed to be taken up in order to utilise Karnataka's full share of water in Krishna basin" ಅದಕ್ಕೆ ಉತ್ತರ "Projectwise details are furnished in the enclosed statement. ಎಂದು ಇದೆ. ಎನ್‌ಕ್ಲೋಸ್ಡ್ ಸ್ಟೇಟ್‌ಮೆಂಟ್‌ನಲ್ಲಿ ತೆಗೆದುಕೊಂಡಿರುವ ಯೋಜನೆಗಳು. 16, ತೆಗೆದುಕೊಳ್ಳಬೇಕಾದ ಕಾಮಗಾರಿಗಳು 11 ಎಂದು ಇದೆ. ಅಂದರೆ

ಒಟ್ಟು 27 ಆಯಿತು. ನಾನು ತಮ್ಮ ಮೂಲಕ ಮಾನ್ಯ ಮುಖ್ಯಮಂತ್ರಿಗಳನ್ನು ಕೇಳುವುದು - Whether this includes both stage-I and Stage-II?

ತಾವು ಹೇಳುತ್ತಿರುವುದು 3600 ಕೋಟಿ ರೂಪಾಯಿಗಳು. ಇದು ಸ್ಟೇಜ್-1 ಮತ್ತು ಸ್ಟೇಜ್-2ನ್ನೂ ಪೂರೈಸುವುದಕ್ಕೆ ಸಾಕಾಗುತ್ತದೆಯೇ?

ಶ್ರೀ ಎಸ್. ಬಂಗಾರಪ್ಪ : ಮಾನ್ಯ ಸಭಾಧ್ಯಕ್ಷರೇ, ಕಾವೇರಿ ವಿಚಾರದಲ್ಲಿ ನಾನು ಪ್ರತ್ಯೇಕವಾಗಿ ಹೇಳುತ್ತೇನೆ ಎನ್ನತಕ್ಕಂಥ ಮಾತನ್ನು ಹೇಳಿದ್ದರಿಂದ,ಈಗ ಪ್ರಶ್ನೋತ್ತರ ಕಾಲದಲ್ಲಿ ಅದು ಬೇಡವೆಂದು ತಾವೇ ಆದೇಶ ಕೊಟ್ಟಿದ್ದೀರಿ ಅದರಂತೆ ಒಪ್ಪಿ ನಾವು ನಡೆಯೋಣ. as far as Krishna basinprojects are concerned. ಇದರಲ್ಲಿ ಎರಡು ವಿಚಾರ ಇದೆ. ಇದರ ಬಗ್ಗೆ ಬೇಡಿಕೆ ಚರ್ಚೆ ಬರುತ್ತಿದೆ. ಅರ್ಬನ್ ಡೆವಲಪ್ ಮೆಂಟ್ ಆದಮೇಲೆ ಅದು ಬರುತ್ತದೆ. ಏಕೆಂದರೆ ಪ್ರಶ್ನೋತ್ತರ ಕಾಲದಲ್ಲಿ ಅಷ್ಟೋಂದು ವಿವರವಾಗಿ ಉತ್ತರ ಕೊಡುವುದಕ್ಕೆ ಆಗುವುದಿಲ್ಲ. ತಮ್ಮ ಪ್ರಶ್ನೆಗೆ ವಿವರವಾದ ಉತ್ತರ ಕೊಡಬೇಕೆಂದು ಸರ್ಕಾರಕ್ಕೆ ಆಸೆ ಇದೆ. ನಂತರ ಫಂಡ್ಸ್ ವಿಚಾರದಲ್ಲಿ ಒಂದು ವಿಚಾರ ಮಾತ್ರಪ್ರಸ್ತಾಪ ಮಾಡುವುದಕ್ಕೆ ಇಚ್ಛೆ ಪಡುತ್ತೇನೆ. ಈಗಾಗಲೇ ಮಾನ್ಯ ನೀರಾವರಿ ಸಚಿವರು ತಿಳಿಸಿದ್ದಾರೆ.

This is funded by the world bank. This Upper Krishna Project, is world bank aided projeeh. ಅದು ಈ ಶತಮಾನದ ಅಂತ್ಯದ ವೇಳೆಗೆ ಅಂತ ಇದ್ದು, ಈಗಾಗಲೇ 91ನೇ ಇಸವಿಯನ್ನು ಕಳೆಯುತ್ತಿದ್ದೇವೆ. ಇನ್ನು ನಮಗೆ ಉಳಿದಿರತಕ್ಕಂಥಾದ್ದು ಎಂಟೂವರೆ, ಸಂಭತ್ತು ವರ್ಷ ಮಾತ್ರ ಅದರ ಮಧ್ಯ ನಾವು ನೀರನ್ನೂ ಉಪಯೋಗ ಮಾಡಿಕೊಳ್ಳಬೇ ೦. ಬಚಾವತ್ ಅವಾರ್ಡ್ ಏನಿದೆ, ಅದನ್ನು ಗಮನದಲ್ಲಿಟ್ಟುಕೊಂಡೇ ನಾವು ಹೋಗಬೇಕು. ವಿವರಕ್ಕೆ ನಾನು ಹೋಗುವುದಿಲ್ಲ. ಪ್ರಶ್ನೋತ್ತರ ಕಾಲದಲ್ಲಿ ಹಾಗೆ ವಿವರವಾಗಿ ಹೋಗುವುದಕ್ಕೆ ಸಾಧ್ಯವಾಗುವುದಿಲ್ಲ. ಆದರೆ ಇದಕ್ಕೆ ಬೇಕಾಗಿರತಕ್ಕಂಥ ಹಣವನ್ನು ಜಾಗತಿಕ ಬ್ಯಾಂಕ್ ಕೊಡತಕ್ಕಂಥ ವಿಚಾರ ಇರುವುದರಿಂದ ಹಣಕಾಸಿನ ಕೊರತೆ ಇದಕ್ಕೆ ಬರುವುದಿಲ್ಲ. ಇಲ್ಲಿ ರಿಯಂಬರ್ಸ್ ಮಾಡತಕ್ಕಂಥ ಪ್ರೋರ್ಷನ್ ಏನು ಇದೆಯಲ್ಲ, ಈ ವರ್ಲ್ಡ್ ಬ್ಯಾಂಕ್‌ನಿಂದ ಕೊಡತಕ್ಕಂಥಾದ್ದು, ನಾವು ಅದಕ್ಕೆ ಕೊಡಬೇಕಾಗಿರುವುದು, ಆ ವಿಚಾರವನ್ನು ಗಮನದಲ್ಲಿಟ್ಟು ಕೊಂಡೇ ಮುಂದೆ ಹೋಗುತ್ತಿದ್ದೇವೆ. ಮೊನ್ನೆ ಮೊನ್ನೆ ವರ್ಲ್ಡ್ ಬ್ಯಾಂಕ್ ಟೀಮ್ ಬಂದಾಗ, ಭೀಮರಾಯನ ಗುಡಿಗೆ, ಯು.ಕೆ.ಪಿ.ಗೆ ಸಂಬಂಧಪಟ್ಟ ಹಾಗೆ ಹೆಡ್‌ಆಫೀಸ್‌ಅಲ್ಲಿದೆ. That was before the expansion of the ministry. ಶ್ರೀ ಮಲ್ಲಾರ ಗೌಡ ಪಾಟೀಲರು ಸಚಿವರು ಆಗುವುದಕ್ಕೆ ಮೊದಲು.

1.15 ಪಿ.ಎಂ

ನಾನೇ ಹೋಗಿದ್ದೇನೆ. Actually there was red alert ತೆಗೆದುಹಾಕತಕ್ಕ ಕೆಲಸಕ್ಕೆ ನಾವು ಕಾರ್ಯಕ್ರಮಹಾಕಿದ್ದೇವೆ.

ಆಫೀಸರನ್ನು ಪೋಸ್ಟ್ ಮಾಡಿದ್ದೇವೆ. ಜಿ.ಒ.ಇಷ್ಯೂ ಮಾಡಿದ್ದೇವೆ, ಶಾಸನಸಭೆಯಲ್ಲಿ ತಿಳಿಸಿದ್ದೇವೆ. ನಮ್ಮ ಭಾಗದ ಹಣವನ್ನೂ ಬಿಡುಗಡೆ ಮಾಡುವುದಕ್ಕೆ ಏನು ಕಾರ್ಯಕ್ರಮ ಮಾಡಬೇಕೋ ಅದನ್ನು ಮಾಡಿಕೊಂಡಿದ್ದೇವೆ. The world bank team gone over to Bhimarayanagudi, the dam has a leak on that day. ನಾನೂ ಕೂಡ ಕೆಲವು ಕೆಲಸಗಳ ಬಗ್ಗೆ ಇನ್‌ಸ್ಪೆಕ್ಷನ್ ಮಾಡತಕ್ಕ ಕೆಲಸ ಕೂಡ ಮಾಡಿದ್ದೇನೆ. ಕಾಲದ

ಅಭಾವದಿಂದ ಪೂರ್ತಿಯಾಗಿ ನೋಡುವುದಕ್ಕಾಗಲಿಲ್ಲ. ರೆಡ್ ಅಲರ್ಟ್ ಪ್ರಶ್ನೆ ನಮಗೆ ಇಲ್ಲ ಆ ಟೀಮ್‌ನವರು ಸಂತೋಷದಿಂದ ಹೋಗಿದ್ದಾರೆ. ಇದರ ಅರ್ಥ, ಅವರು ಹಣವನ್ನು ಬಿಡುಗಡೆ ಮಾಡುವುದಕ್ಕೆ, ತಯಾರಿದ್ದಾರೆ. ನಮ್ಮ ಭಾಗದ ಹಣವನ್ನೂ ಬಿಡುಗಡೆ ಮಾಡುವುದಕ್ಕೆ ನಾವು ಸಿದ್ಧಮಾಡಿ ಇಟ್ಟುಕೊಂಡಿದ್ದೇವೆ. ಇದು ಇರತಕ್ಕಂಥದ್ದು ಮಾನ್ಯ ವಾಟಾಳ್ ನಾಗರಾಜ್‌ರವರು ಕೇಳಿದ್ದಾರೆ. ಆಂಧ್ರ ಪ್ರದೇಶದ ಮುಖ್ಯಮಂತ್ರಿಗಳೂ ನಾವೂ ಮಾತುಕತೆ ಆಗಬೇಕೆಂದು ಅಷ್ಟೇ ಅಲ್ಲ, ತಮಗೆ ಗೊತ್ತಿರುವಹಾಗೆ ಕುಡಿಯುವ ನೀರಿನ ವಿಚಾರದಲ್ಲಿ ಮಹಾರಾಷ್ಟ್ರದ ಮುಖ್ಯಮಂತ್ರಿಗಳೂ ಕೂಡ ಇದಕ್ಕೆ ಬರಬೇಕಾಗುತ್ತದೆ. ಅದೂ ಒಂದು ಭಾಗ. ಹಾಗೆಯೇ ತಮಿಳುನಾಡಿನ ಮುಖ್ಯಮಂತ್ರಿಗಳೂ ಬರತಕ್ಕಂಥದ್ದು, 5 ಟಿ.ಎಂ.ಸಿ. ಅಥವಾ 10 ಟಿ.ಎಂ.ಸಿ. ನೀರನ್ನು ಮದ್ರಾಸ್ ಸಿಟಿಗೆ ಕುಡಿಯುವುದಕ್ಕೆ ಕೊಡತಕ್ಕ ವಿಚಾರವೂ ಇಲ್ಲಿದೆ. ಮುಖ್ಯವಾಗಿ ಬರತಕ್ಕಂಥಾದ್ದು, ಮಹಾರಾಷ್ಟ್ರ, ಆಂಧ್ರ ಮತ್ತು ನಾವು ಆಂಧ್ರ ಮುಖ್ಯಮಂತ್ರಿಗಳು ಬದಲಾವಣೆಯಾದ ಮೇಲೆ ಒಂದು ಸಾರಿ ತಾರೀಖಿನಿಗದಿ ಆಗಿತ್ತು. ಅವರ ಮನೆಯಲ್ಲಿ ಅವರ ಮನೆಯಲ್ಲಿ ಮ್ಯಾರೇಜ್ ಬಂದು. ಈ ಕಾರಣದಿಂದ ಇದು ಮುಂದಕ್ಕೆ ಹೋಯಿತು. ತಾರೀಖು ಸದ್ಯದಲ್ಲಿಯೇ ತಿಳಿಸುತ್ತೇವೆ ಎನ್ನುವ ಮಾತನ್ನು ಅವರುಹೇಳಿದ್ದಾರೆ. ತಾರೀಖು ತಿಳಿದ ಮೇಲೆ ಮಹಾರಾಷ್ಟ್ರ ಆಂಧ್ರ ಮತ್ತು ನಾವು ಇದರ ಬಗ್ಗೆ ಶೀಘ್ರವಾಗಿ ಮಾತುಕತೆಗೆ ಕುಳಿತುಕೊಳ್ಳಬೇಕಾಗುತ್ತದೆ.as far as Krishna water matter is concerned, ನಾವು ಕುಳಿತುಕೊಳ್ಳುತ್ತೇವೆ.ನಾವು ಕೇಳಿದ್ದೇವೆ. ನಾವಂತೂ ಸಿದ್ದ ತಾರೀಖು ಕೊಡಿ ಎನ್ನತಕ್ಕ ಮಾತನ್ನು ತಿಳಿಸಿದ್ದೇವೆ. ಇಷ್ಟು ವಿಚಾರ ಹಣಕಾಸಿನ ವಿಚಾರದ ಬಗ್ಗೆ ಕೊರತೆ ಇಲ್ಲ. The only thing is

ಅಲ್ಲಿ ವರ್ಗಾವರ್ಗಿ ಮತ್ತೊಂದು ಆಫೀಸರು, ಇಲ್ಲವೆಂದ ತಕ್ಷಣ ಕೆಲಸ ಕಾರ್ಯಗಳು ಮಲಗಿ ಬಿಡುತ್ತವೆ. ನಾವೂ ಬಹಳ ಬಿಗಿಯಾಗಿದ್ದೇವೆ, ಅಲ್ಲಿ ಯಾವ ಒಬ್ಬ ಆಫೀಸರನ್ನೂ ಅಲ್ಲಿಂದ ವರ್ಗಾವರ್ಗಿ ಮಾಡುವಹಾಗಿಲ್ಲ. ಯು.ಕೆ.ಪಿ. ಬೇಸಿನ್‌ನಿಂದ ಯಾರಾದರೂ ವರ್ಗಾವರ್ಗಿ ಕೇಳಿಕೊಂಡು ಬಂದರೆ, ಅವರನ್ನು ಸಸ್ಪೆಂಡ್ ಮಾಡುತ್ತೇವೆ ಎನ್ನತಕ್ಕ ಬಿಗಿ ನಿಲುವನ್ನು ತೆಗೆದುಕೊಂಡು ಕರಾರುವಾಕ್ಕಾಗಿ ಹೋಗುತ್ತಿದ್ದೇವೆ. ಜೊತೆಗೆ ಉಳಿದಿರತಕ್ಕಂಥ ಇಂಜಿನಿಯರ್ಸ್ ಪೋಸ್ಟನ್ನು ಭರ್ತಿ ಮಾಡುವುದಕ್ಕೋಸ್ಕರ ಮತ್ತೆ ಅಪ್ಲಿಕೇಷನ್ ಕರೆದು, ಸಂದರ್ಶನ ಕರೆಯುವ ಸಿದ್ಧತೆ ಮಾಡಲಾಗಿದೆ. ಪಿ.ಡಬ್ಲ್ಯೂ.ಡಿ. ಮತ್ತು ಇರಿಗೇಷನ್ ಎರಡು ಇಲಾಖೆಯವರೂ ಒಟ್ಟೊಟ್ಟಿಗೆ ಸೇರಿ ಈ ಕಾರ್ಯಕ್ರಮ ಮಾಡಿದ್ದಾರೆ. ವಿವರಗಳ ಬಗ್ಗೆ ಬೇಡಿಕೆಯ ಮೇಲೆ ಚರ್ಚೆ ಬರುತ್ತದೆ. ಆಗ ನಾವು ವಿವರವಾದ ಉತ್ತರವನ್ನು ಕೊಡುತ್ತೇವೆ.

ಪ್ರೊ. ಎಂ.ಡಿ. ನಂಜುಂಡಸ್ವಾಮಿ : ಒಂದೇ ಒಂದು ಕ್ಲಾರಿಫಿಕೇಷನ್ ಮುಖ್ಯಮಂತ್ರಿಗಳಿಂದ. ಇವತ್ತು ಕೊಟ್ಟಿರುವುದರಲ್ಲಿ ಹೇಳಿರುವುದು, 'As the UKP Stage II is still under investigation, the amount required for its completion will be known only after a detailed estimate is prepared." ಯಾವಾಗ ಇದನ್ನು ತಯಾರು ಮಾಡಿದ್ದೀರಿ.

ಶ್ರೀ ಎಸ್. ಬಂಗಾರಪ್ಪ : ಯು.ಕೆ.ಪಿ. ಎರಡನೇ ಹಂತದ ಕೆಲಸವನ್ನೂ ಆದಷ್ಟು ಶೀಘ್ರವಾಗಿ ಮಾಡುತ್ತೇವೆ. ಮಾನ್ಯ ಸದಸ್ಯರಿಗೆ ಗೊತ್ತಿದೆ, 8-9 ವರ್ಷಗಳ

ಕಾಲ, ನಮಗೆ ಉಳಿದಿರತಕ್ಕದ್ದು ಇವೆಷ್ಟಿಗೇಷನ್ ಕೆಲಸವನ್ನೂ ಸಹ ಶಿಫ್ಟ್ ಸ್ಪೀಡ್ ಅಪ್ ಮಾಡಿದ್ದೇವೆ. ಇದು ವಿಳಂಬ ಆಗದ ಹಾಗೆ ನೋಡಿಕೊಳ್ಳುತ್ತೇವೆ.

Prof. M.D. Nanjundaswamy: Before 2000 AD?

ಶ್ರೀ ಎಸ್. ಬಂಗಾರಪ್ಪ : ತಾವು ಹೇಳುವುದು ಕಂಪ್ಲೀಷನ್ ಎಂದು ಕಾಣುತ್ತದೆ.

ಶಿವಮೊಗ್ಗ ಜಿಲ್ಲೆಯ ಏತ ನೀರಾವರಿ ಯೋಜನೆಗಳು

2480 - ಶ್ರೀ. ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ) : ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಲಿಫ್ಟ್ ಇರಿಗೇಶನ್ ಕಾರ್ಪೋರೇಷನ್ ಮೂಲಕ 1990-91 ಮತ್ತು 1991-92ನೇ ಸಾಲಿನಲ್ಲಿ ಶಿವಮೊಗ್ಗ ಜಿಲ್ಲೆಯಲ್ಲಿ ಕೈಗೊಂಡಿರುವ ಮತ್ತು ಕೈಗೊಳ್ಳಬೇಕೆಂದಿರುವ ಲಿಫ್ಟ್ ಇರಿಗೇಶನ್ ಯೋಜನೆಗಳ ವಿವರ ಮತ್ತು ಪ್ರತಿಯೊಂದು ಕೆಲಸಕ್ಕೆ ಖರ್ಚು ಮಾಡಲಾಗಿರುವ ಅಂದಾಜು ಮೊತ್ತವೆಷ್ಟು?

ಶ್ರೀ ಕೆ.ಎಸ್. ಮಲ್ಲಿಕಾರ್ಜುನ ಪ್ರಸನ್ನ (ಸಣ್ಣ ನೀರಾವರಿ ರಾಜ್ಯ ಸಚಿವರು):

ಅ) ಲಿಫ್ಟ್ ಇರಿಗೇಶನ್ ಮೂಲಕ 1990-91ನೇ ಸಾಲಿನಲ್ಲಿ ಆಗಲಿ, 1991-92ನೇ ಸಾಲಿನಲ್ಲಿ ಆಗಲಿ, ಶಿವಮೊಗ್ಗ ಜಿಲ್ಲೆಯಲ್ಲಿ, ಯಾವುದೇ ಯೋಜನೆಯನ್ನು ಕೃಷ್ಣಾ ಜಲಾನಯನ ಏತ ನೀರಾವರಿ ನಿಗಮದಿಂದ ಕೈಗೊಂಡಿರುವುದಿಲ್ಲ.

ಲಿಫ್ಟ್ ಇರಿಗೇಶನ್ ಮೂಲಕ 1990-91 ಹಾಗೂ 1991-92ನೇ ಸಾಲಿನಲ್ಲಿ ಶಿವಮೊಗ್ಗ ಜಿಲ್ಲೆಯಲ್ಲಿ ಕೈಗೊಳ್ಳಬೇಕೆಂದಿರುವ ಏತ ನೀರಾವರಿ ಯೋಜನೆಗಳ ವಿವರ ಮತ್ತು ಪ್ರತಿಯೊಂದು ಯೋಜನೆಗೆ ವೆಚ್ಚ ಮಾಡಲಾಗುವ ಅಂದಾಜು ಮೊತ್ತ ಇವುಗಳನ್ನು ಪ್ರತ್ಯೇಕವಾಗಿ ಲಗತ್ತಿಸಿದೆ.

1990-91ನೇ ಸಾಲಿನ ಕಾರ್ಯಯೋಜನೆಯಲ್ಲಿ, ಶಿವಮೊಗ್ಗ ಜಿಲ್ಲೆಯ 6 ಯೋಜನೆಗಳಿದ್ದು, ಅವು ಯಾವುವೆಂದರೆ:

	ಅಂದಾಜಿನ ಮೊತ್ತ ಲಕ್ಷ ರೂ.ಗಳಲ್ಲಿ
1. ಏತ ನೀರಾವರಿ ಯೋಜನೆ ಜೋಳದ ಗುಡ್ಡ ಹತ್ತಿರ ತಾ: ಸೊರಬ	13.338
2. ಏತ ನೀರಾವರಿ ಯೋಜನೆ ತೊರವಂಡಾ ತಾ. ಸೊರಬ	26.869
3. ಕಾಗೋಡು ಹತ್ತಿರ ತಾ. ಸಾಗರ	10.855
4. ತಡಗಲಲೆ ಹತ್ತಿರ ತಾ. ಸಾಗರ	8.236
5. ಬಟಾನಿಜಡ್ಡು ಹತ್ತಿರ ತಾ. ಹೊಸನಗರ	2.615
6. ಭೀಮನಕಟ್ಟೆ ಹತ್ತಿರ ತಾ. ತೀರ್ಥಹಳ್ಳಿ	13.00

1991-92ನೇ ಸಾಲಿನ ಕಾರ್ಯಯೋಜನೆಯಲ್ಲಿ 1990-91ನೇ ಸಾಲಿನ ಮೇಲ್ಕಾಣಿಸಿದ 6 ಯೋಜನೆಗಳಲ್ಲದೆ ಕೆಳಕಾಣಿಸಿದ 7 ಯೋಜನೆಗಳನ್ನು ಸೇರಿಸಿಕೊಳ್ಳಲಾಗಿದೆ.